# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನಭವನ, ನಂ. 24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

## ಕರಾವಿಪ ಸಂಸ್ಥೆಯ ದಾಖಲೆ ಪತ್ರ ಮತ್ತು ನಿಯಮ ನಿಬಂಧನೆಗಳಿಗೆ ಉದ್ದೇಶಿತ ತಿದ್ದುಪಡಿಗಳ ವಿವರಗಳು

| ನಿಯಮ ಸಂಖ್ಯೆ | **ಸಂಸ್ಥೆಯ ದಾಖಲೆ ಪುಸ್ತಕದಲ್ಲಿ ಇರುವಂತೆ** | **ಉದ್ದೇಶಿತ ತಿದ್ದುಪಡಿ** |
|---|---|---|
| ಕರಾವಿಪ ಸಂಸ್ಥೆಯ ದಾಖಲೆ ಪತ್ರಗಳಿಗೆ ಸಂಬಂಧಿಸಿದಂತೆ ಉದ್ದೇಶಿತ ತಿದ್ದುಪಡಿಗಳು | | |
| 3.2 | ಮುಖ್ಯವಾಗಿ ಕನ್ನಡದಲ್ಲಿ ಉಪನ್ಯಾಸ, ವಿಚಾರ ಸಂಕಿರಣ, ಸಾರ್ವಜನಿಕ ವಿಚಾರಗೋಷ್ಠಿ, ಶೈಕ್ಷಣಿಕ ಪ್ರವಾಸ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ವಿಜ್ಞಾನ ಪುಸ್ತಕಗಳು ಹಾಗೂ ನಿಯತಕಾಲಿಕಗಳನ್ನು ಪ್ರಕಟಿಸಿ ವಿತರಣೆ ಮಾಡುವುದರ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವುದು. | ಕನ್ನಡ ಮತ್ತು ಇತರ ಭಾಷೆಗಳಲ್ಲಿ ಉಪನ್ಯಾಸ, ವಿಚಾರ ಸಂಕಿರಣ, ಸಾರ್ವಜನಿಕ ವಿಚಾರಗೋಷ್ಠಿ, ಶೈಕ್ಷಣಿಕ ಪ್ರವಾಸ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ಅಪರೂಪದ ಹಾಗೂ ಅತ್ಯುತ್ತಮ ಪ್ರಕಟಣೆಗಳನ್ನು ಕೈಗೊಳ್ಳುವುದು. ನಿಯತಕಾಲಿಕಗಳನ್ನು ಪ್ರಕಟಿಸಿ ವಿತರಣೆ ಮಾಡುವುದರ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವುದು. ಬೇರೆ ಭಾಷೆಗಳಲ್ಲಿ ಬಂದಂತಹ ಅತ್ಯುತ್ತಮ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸುವುದು. |
| 3.6 | **'ಪರಿಷತ್ತಿನ ಉದ್ದೇಶಗಳು' ಉಪಶೀರ್ಷಿಕೆಯಡಿಯಲ್ಲಿ ನೂತನ ಸೇರ್ಪಡೆ.** | ಪ್ರತಿಷ್ಠಿತ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ವಿಜ್ಞಾನ ಸಂವಹನ ಅಥವಾ ಇನ್ನಾವುದೇ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೃಜನಾತ್ಮಕ ಚಟುವಟಿಕೆ ಹಾಗೂ ಸಂಶೋಧನೆಗಳಿಗಾಗಿ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನಾ ಸಂಸ್ಥೆಯೊಂದನ್ನು ಆರಂಭಿಸುವುದು. ಅದರಂತೆ ಪ್ರಸ್ತುತ ಸಂಸ್ಥೆಯಿಂದ ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸುವುದು |
| ಕರಾವಿಪ ಸಂಸ್ಥೆಯ ನಿಯಮ ನಿಬಂಧನೆಗಳಿಗೆ ಸಂಬಂಧಿಸಿದಂತೆ ಉದ್ದೇಶಿತ ತಿದ್ದುಪಡಿಗಳು | | |
| 1.2–ಐ | **'ನಿರೂಪಣೆಗಳು' ಉಪಶೀರ್ಷಿಕೆಯಡಿಯಲ್ಲಿ ನೂತನ ಸೇರ್ಪಡೆ.** | 'ಜಿಲ್ಲಾ ಸಮಿತಿ' ಎಂದರೆ ಜಿಲ್ಲೆಯ ಅಂಗೀಕೃತ ಕರಾವಿಪ ದಾನಿ ಸದಸ್ಯರು, ದಾನಿ ಸಂಸ್ಥೆಗಳ ಪ್ರತಿನಿಧಿಗಳು, ವಿಜ್ಞಾನ ಕೇಂದ್ರದ ಪ್ರತಿನಿಧಿ ಮತ್ತು ಘಟಕಗಳ ಸಂಚಾಲಕರು ಇವರನ್ನೊಳಗೊಂಡ ಸಮಿತಿ. |
| 2<br>2.1 | 18 ವರ್ಷಕ್ಕೂ ಮೇಲ್ಪಟ್ಟಿರುವ ಮತ್ತು ನೋಂದಾಯಿತ ಘಟಕ ಸಂಚಾಲಕರು. | ಘಟಕ ಸದಸ್ಯತ್ವ : ನೋಂದಾಯಿತ ಘಟಕದ 18 ವರ್ಷಕ್ಕೆ ಮೇಲ್ಪಟ್ಟಿರುವ ಸಂಚಾಲಕರು ಕರಾವಿಪ ಘಟಕದ ಪರವಾಗಿ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಅವರು ಕರಾವಿಪದ ತ್ರೈವಾರ್ಷಿಕ ಚುನಾವಣೆಯಲ್ಲಿ ಮತ ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. |
| 2.1<br>(ಅ) | ಅಜೀವ ಸದಸ್ಯರು : ಕನಿಷ್ಠ ರೂ.500/– ಅಥವಾ ಅದಕ್ಕೂ ಮೇಲ್ಪಟ್ಟ | ಅಜೀವ ಸದಸ್ಯರು ರೂ.1500/–ಗಳ ಹೆಚ್ಚಿನ ಮೊತ್ತವನ್ನು ನೀಡಿ ದಾನಿ(ವೈಯಕ್ತಿಕ) ಸದಸ್ಯತ್ವವನ್ನು |

| | | |
|---|---|---|
| | ಶುಲ್ಕವನ್ನು ಕರಾವಿಪಕ್ಕೆ ನೀಡುವವರನ್ನು ಕರಾವಿಪದ ಅಜೀವ ಸದಸ್ಯರೆಂದು ಪರಿಗಣಿಸಲಾಗುತ್ತದೆ. ಈಗಾಗಲೇ ಅಜೀವ ಸದಸ್ಯರಾದವರು ರೂ. 500/– ಹೆಚ್ಚಿಗೆ ಕೊಟ್ಟಲ್ಲಿ ದಾನಿ ಸದಸ್ಯರಾಗಬಹುದು. | ಪಡೆದುಕೊಳ್ಳುವದು. |
| 3<br>3.1 | 'ಎರಡನೇ ಪ್ಯಾರಾ'<br>ಅಜೀವ ಸದಸ್ಯರು ಸೇರಿದಂತೆ ದಾನಿಗಳು (ವೈಯಕ್ತಿಕ) ಹಾಗೂ ದಾನಿ ಸದಸ್ಯ ಸಂಸ್ಥೆಗಳು ಕರಾವಿಪದಿಂದ ಪ್ರಕಟವಾಗುವ ಪ್ರತಿಯೊಂದು ನಿಯತಕಾಲಿಕದ ಒಂದೊಂದು ಪ್ರತಿಯನ್ನು ಉಚಿತವಾಗಿ ಪಡೆಯುವ ಹಕ್ಕಿದೆ. | 'ಎರಡನೇ ಪ್ಯಾರಾ'<br>ದಾನಿಗಳಿಗೆ(ವೈಯಕ್ತಿಕ) ಹಾಗೂ ದಾನಿ ಸದಸ್ಯ ಸಂಸ್ಥೆಗಳಿಗೆ ಕರಾವಿಪದಿಂದ ಪ್ರಕಟವಾಗುವ ಪ್ರತಿಯೊಂದು ನಿಯತಕಾಲಿಕದ ಒಂದೊಂದು ಪ್ರತಿಯನ್ನು ಉಚಿತವಾಗಿ ಪಡೆಯುವ ಹಕ್ಕಿದೆ. |
| 6<br>6.1 | ಘಟಕ : ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸ್ವತಂತ್ರ ಘಟಕವೊಂದನ್ನು ರೂಪಿಸಿಕೊಂಡು ಕರಾವಿಪದ ಮಾನ್ಯತೆ ಪಡೆಯಬಹುದು. ಇಂತಹ ಘಟಕಗಳು ತಮ್ಮದೇ ಆದ ಸ್ಥಿರ–ಚರ ಆಸ್ತಿಗಳನ್ನು ಹೊಂದಿರಬಹುದು. | ಘಟಕ : ಕರಾವಿಪದ ಧ್ಯೇಯೋದ್ದೇಶಗಳಿಗೆ ಬದ್ಧರಾದ ಹಾಗೂ 18 ವರ್ಷ ಮೀರಿದ ಮತ್ತು ರೂ.25/– ಅಥವಾ ಅದಕ್ಕೂ ಮೇಲ್ಪಟ್ಟು ವಾರ್ಷಿಕ ಶುಲ್ಕ ನೀಡುವ 10 ಅಥವಾ ಅದಕ್ಕೂ ಹೆಚ್ಚು ವ್ಯಕ್ತಿಗಳ ಯಾವುದೇ ಗುಂಪು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸ್ವತಂತ್ರ ಘಟಕವೊಂದನ್ನು ರೂಪಿಸಿಕೊಂಡು ಕರಾವಿಪದ ಮಾನ್ಯತೆ ಪಡೆಯಬಹುದು. ಇಂತಹ ಘಟಕಗಳು ತಮ್ಮದೇ ಆದ ಸ್ಥಿರ–ಚರ ಆಸ್ತಿಗಳನ್ನು ಹೊಂದಬಹುದು. |
| 6.1<br>(ii) | ಈ ಘಟಕಕ್ಕೆ ಸದಸ್ಯರಿಂದ ಚುನಾಯಿತನಾದ ಸಂಚಾಲಕ ಇರತಕ್ಕದ್ದು ಹಾಗೂ ಅಗತ್ಯ ಕಂಡರೆ ಆತನ ಸಹಾಯಕ್ಕೆ ಒಂದು ಚುನಾಯಿತ ಸಮಿತಿಯನ್ನು ರೂಪಿಸಿಕೊಳ್ಳಬಹುದು. ಈ ಸಮಿತಿ ಕನಿಷ್ಟ ಮೂರು ವರ್ಷಗಳಿಗೊಮ್ಮೆ ಪುನರ್ರಚಿತವಾಗಬೇಕು. | ಯಾವುದೇ ಕರಾವಿಪ ಘಟಕದಲ್ಲಿ ಆಯಾ ಘಟಕದ ಸದಸ್ಯರಿಂದ ಚುನಾಯಿತರಾದ ಒಂದು ಆಡಳಿತ ಮಂಡಳಿ ಇರತಕ್ಕದ್ದು. ಘಟಕಕ್ಕೆ ಒಬ್ಬ ಸಂಚಾಲಕನನ್ನು ಸದಸ್ಯರು ಚುನಾಯಿಸತಕ್ಕದ್ದು. ಘಟಕವು ಕರಾವಿಪದಿಂದ ಮಾನ್ಯತೆ ಪಡೆದುಕೊಳ್ಳತಕ್ಕದ್ದು. ಈ ಮಂಡಳಿ ಕನಿಷ್ಠ ಮೂರು ವರ್ಷಗಳಿಗೊಮ್ಮೆ ಪುನರ್ರಚಿತವಾಗಬೇಕು. ಪ್ರತಿ ವರ್ಷ ಘಟಕದ ನೋಂದಣಿಯನ್ನು (ಚಟುವಟಿಕೆಗಳ ವರದಿಯನ್ನು ಹಾಗೂ ನವೀಕರಣ ಶುಲ್ಕವನ್ನು ಸಲ್ಲಿಸಿ) ನವೀಕರಣಗೊಳಿಸುವದು. |
| 6.2<br>(i)<br><br>(ii) | ಒಂದು ಜಿಲ್ಲೆಯಲ್ಲಿ ಕನಿಷ್ಠ ಹತ್ತು (10) ಘಟಕಗಳಿದ್ದಲ್ಲಿ ಆ ಜಿಲ್ಲೆಯ ಎಲ್ಲ ಘಟಕಗಳೂ ಸೇರಿ ಕರಾವಿಪದ ಮಾರ್ಗದರ್ಶನದಲ್ಲಿ ಜಿಲ್ಲಾ ಸಮಿತಿಯನ್ನು ರಚಿಸಿಕೊಂಡು ಕರಾವಿಪದ ಮಾನ್ಯತೆ ಪಡೆಯಬೇಕು.<br>ಘಟಕಗಳ ಸಂಖ್ಯೆ ಹತ್ತಕ್ಕೂ ಹೆಚ್ಚಿದಲ್ಲಿ ಸಂಚಾಲಕರೆಲ್ಲರೂ ಸೇರಿ ತಮ್ಮಲ್ಲಿ ಹತ್ತು ಮಂದಿಯನ್ನು ಚುನಾಯಿಸಿ ಜಿಲ್ಲಾ ಸಮಿತಿಯನ್ನು ರಚಿಸಬೇಕು. | 6.2(i) ಒಂದು ಜಿಲ್ಲೆಯಲ್ಲಿ ದಾನಿ ಸದಸ್ಯರು, ದಾನಿ ಸಂಸ್ಥೆಗಳು, ಘಟಕಗಳು ಹಾಗೂ ವಿಜ್ಞಾನ ಕೇಂದ್ರಗಳ ಒಟ್ಟು ಸಂಖ್ಯೆ 10ಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅವರೆಲ್ಲರೂ ಸೇರಿದಂತೆ ಕರಾವಿಪದ ಮಾರ್ಗದರ್ಶನದೊಂದಿಗೆ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಸಭೆ ಕರೆದು (10) ಹತ್ತು ಜನರ ಕಾರ್ಯಕಾರಿ ಮಂಡಳಿಯನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ರಚಿಸಬೇಕು ಮತ್ತು ನಿಗದಿತ ಶುಲ್ಕ ಕಟ್ಟಿ ಜಿಲ್ಲಾ ಸಮಿತಿಗೆ ಕರಾವಿಪದ ಮಾನ್ಯತೆ ಪಡೆಯಬೇಕು. ಘಟಕದಂತೆ ಜಿಲ್ಲಾ ಸಮಿತಿಯೂ ಸಹ ಕನಿಷ್ಠ ಮೂರು (3) ವರ್ಷಗಳಿಗೊಮ್ಮೆ ಪುನರ್ರಚಿತವಾಗತಕ್ಕದ್ದು. |

| | | |
|---|---|---|
| | | ಜಿಲ್ಲಾ ಸಮಿತಿಯ ರಚನೆ ಕುರಿತಂತೆ ದಿನಾಂಕ, ಸ್ಥಳ ಹಾಗೂ ಸಮಯ ನಿಗದಿಪಡಿಸಿದ ಪತ್ರವು ಕರಾವಿಪ ಕೇಂದ್ರ ಕಚೇರಿಯಿಂದ ಆಯಾ ಜಿಲ್ಲೆಯ ಸದಸ್ಯರಿಗೆ ರವಾನೆಯಾಗತಕ್ಕದ್ದು ಮತ್ತು ಕರಾವಿಪ ಕಾರ್ಯಕಾರಿ ಸಮಿತಿಯು ನಾಮಕರಣ ಮಾಡಿದ ಸದಸ್ಯರು ಪ್ರಸ್ತುತ ಜಿಲ್ಲಾ ಸಮಿತಿ ರಚನೆಯಲ್ಲಿ ಕರಾವಿಪದ ಅಧಿಕೃತ ವೀಕ್ಷಕರಾಗಿ ಪಾಲ್ಗೊಳ್ಳತಕ್ಕದ್ದು. |
| 6.2 (iii) | ಜಿಲ್ಲಾ ಸಮಿತಿಯು ತನ್ನ ಚಟುವಟಿಕೆಗಳನ್ನು ನಡೆಸಲು ಒಬ್ಬ ಸಂಚಾಲಕರನ್ನು ಚುನಾಯಿಸತಕ್ಕದ್ದು. ಜಿಲ್ಲಾಸಮಿತಿಯು ಪ್ರತಿವರ್ಷವೂ ಕಾರ್ಯಕಾರಿ ಸಮಿತಿಗೆ ವಾರ್ಷಿಕ ವರದಿ ಮತ್ತು ಆಯ–ವ್ಯಯ ಲೆಕ್ಕವನ್ನು ಕಳುಹಿಸಬೇಕು. | 6.2(ii) ಕಾರ್ಯಕಾರಿ ಮಂಡಳಿಯ ಸದಸ್ಯರೆಲ್ಲರೂ ಸೇರಿ ಜಿಲ್ಲಾ ಸಮಿತಿಯ ಅಧ್ಯಕ್ಷರು, ಇಬ್ಬರು ಉಪಾಧ್ಯಕ್ಷರುಗಳು, ಕಾರ್ಯದರ್ಶಿ, ಸಹಕಾರ್ಯದರ್ಶಿ, ಖಜಾಂಚಿ ಇವರುಗಳನ್ನು ಆಯ್ಕೆ ಮಾಡುವುದು. ಸಮಿತಿಯ ಎಲ್ಲ ಪತ್ರವ್ಯವಹಾರಗಳನ್ನು ಅಧ್ಯಕ್ಷರು / ಕಾರ್ಯದರ್ಶಿ ನಿರ್ವಹಿಸುವುದು. ಅದರಂತೆ ಸಮಿತಿಯ ಹಣಕಾಸಿನ ಎಲ್ಲ ವ್ಯವಹಾರವನ್ನು ಖಜಾಂಚಿಯು ಅಧ್ಯಕ್ಷರು / ಕಾರ್ಯದರ್ಶಿಯೊಂದಿಗೆ ಜಂಟಿಯಾಗಿ ನಿರ್ವಹಿಸುವುದು. ಇದಕ್ಕಾಗಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಜಂಟಿ ಖಾತೆಯನ್ನು ತೆರೆಯುವುದು. ಜಿಲ್ಲಾ ಸಮಿತಿಯು ಪ್ರತಿ ವರ್ಷ ನಿಗದಿತ ಸಮಯದಲ್ಲಿ ಸಮಿತಿಯ ಸರ್ವಸದಸ್ಯರ ಸಭೆಯನ್ನು ಕರೆದು ಚಟುವಟಿಕೆಗಳ ವರದಿ, ಲೆಕ್ಕಪತ್ರಗಳ ವರದಿ ಇತ್ಯಾದಿ ಮಾಹಿತಿಯನ್ನು ಎಲ್ಲ ಸದಸ್ಯರಿಗೆ ನೀಡಬೇಕು. ಅದರಂತೆ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಗೂ ಸಹ ವಾರ್ಷಿಕ ಚಟುವಟಿಕೆಗಳ ವರದಿ ಹಾಗೂ ಆಯ–ವ್ಯಯ ಪಟ್ಟಿ ವಿವರ ಲೆಕ್ಕಪತ್ರ ವರದಿ ಇತ್ಯಾದಿಗಳನ್ನು ಸಲ್ಲಿಸುವುದು ಅಗತ್ಯ. |
| 6.2 (iii) | ನಾಲ್ಕನೆಯ ಪ್ಯಾರಾದಲ್ಲಿ ನೂತನ ಸೇರ್ಪಡೆ | ಈ ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸುವುದು ಜಿಲ್ಲಾ ಸಮಿತಿಯ ಹೊಣೆಯಾಗಿದೆ ಎಂಬ ಶೀರ್ಷಿಕೆಯಡಿ ನೂತನ ಸೇರ್ಪಡೆ.<br>(5)ಕರಾವಿಪ ಕೇಂದ್ರ ಕಚೇರಿಯಿಂದ ಸೂಚಿಸಿದ ಎಲ್ಲ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವುದು. |
| 6.4.1 (i) | 'ಮೂರನೆಯ ಪ್ಯಾರಾ'<br>ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಮೂರು ವರ್ಷಗಳವರೆಗೆ ಅಧಿಕಾರದಲ್ಲಿ ಇರುತ್ತಾರೆ. ಸಹ ಆಯ್ಕೆಯಾದ ಸದಸ್ಯರ ಚಾಲ್ತಿ ಅವಧಿಯು ಕಾರ್ಯಕಾರಿ ಸಮಿತಿಯದ್ದೇ ಆಗಿರುತ್ತದೆ | ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಚುನಾವಣಾ ಫಲಿತಾಂಶ ಪ್ರಕಟಗೊಂಡ ದಿನದಿಂದ 'ಮೂರು ವರ್ಷಗಳವರೆಗೆ ಅಧಿಕಾರದಲ್ಲಿ ಇರುತ್ತಾರೆ. ಆಯ್ಕೆಯಾದ ಸದಸ್ಯರು ಚಾಲ್ತಿ ಅವಧಿಯು ಕಾರ್ಯಕಾರಿ ಸಮಿತಿಯದೇ ಆಗಿರುತ್ತದೆ. ಮೂರು ವರ್ಷಗಳ ಅವಧಿಯ ನಂತರ ಯಾವುದೇ ಕಾರಣದಿಂದ ನಿಗದಿತ ಸಮಯದಲ್ಲಿ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದಲ್ಲಿ ಗರಿಷ್ಠ ಮೂರು |

| | | |
|---|---|---|
| | | (3) ತಿಂಗಳುಗಳಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಗೊಳಿಸಬೇಕು. ಈ ಮೂರು ತಿಂಗಳ ಅವಧಿಯಲ್ಲಿ ಕಾರ್ಯಕಾರಿ ಸಮಿತಿಗೆ ಯಾವುದೇ ಮಹತ್ವದ ನಿರ್ಣಯ ಕೈಗೊಳ್ಳಲು ಅಧಿಕಾರವಿರುವುದಿಲ್ಲ. |
| 6.4.1<br>(i) | 'ಆರನೆಯ ಪ್ಯಾರಾ'<br><br>ಮತದಾನದ ಎಣಿಕೆಯು ಚುನಾವಣಾ ವರ್ಷದ ವಾರ್ಷಿಕ ಮಹಾಸಭೆಯಂದು ನಡೆದು ಫಲಿತಾಂಶಗಳು ಪ್ರಕಟಗೊಳ್ಳತಕ್ಕದ್ದು. ಈ ವಿಷಯಕ್ಕೆ ಸಂಬಂಧಿಸಿದ ಉಪನಿಯಮಗಳನ್ನು ಕಾರ್ಯಕಾರಿ ಸಮಿತಿ ನಿರ್ಧರಿಸತಕ್ಕದ್ದು. ಹೊಸ ಕಾರ್ಯಕಾರಿ ಸಮಿತಿಯ ಮೊದಲನೇ ಸಭೆಯನ್ನು ಹಿಂದಿನ ಕಾರ್ಯದರ್ಶಿಯು ಒಂದು ವಾರದೊಳಗೆ ಕರೆಯತಕ್ಕದ್ದು. | ಚುನಾವಣಾ ವರ್ಷದ ವಾರ್ಷಿಕ ಮಹಾಸಭೆಯ ವೇಳೆಗೆ ಕಾರ್ಯಕಾರಿ ಸಮಿತಿಯ 24 ಸದಸ್ಯರನ್ನು ಚುನಾವಣಾ ನಿಯಮಾವಳಿಗೆ ಅನುಗುಣವಾಗಿ ಚುನಾಯಿಸತಕ್ಕದ್ದು. ಮತದಾನದ ಎಣಿಕೆಯ ' ಚುನಾವಣಾ ವರ್ಷದ ವಾರ್ಷಿಕ ಮಹಾಸಭೆಯ ಪೂರ್ವದಿನದಂದು ಫಲಿತಾಂಶಗಳು ಪ್ರಕಟಗೊಳ್ಳತಕ್ಕದ್ದು ಮತ್ತು ವಾರ್ಷಿಕ ಮಹಾಸಭೆಯಲ್ಲಿ ಚುನಾವಣೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸತಕ್ಕದ್ದು. ಈ ವಿಷಯಕ್ಕೆ ಸಂಬಂಧಿಸಿದ ಉಪನಿಯಮಗಳನ್ನು ಕಾರ್ಯಕಾರಿ ಸಮಿತಿ ನಿರ್ಧರಿಸತಕ್ಕದ್ದು. ಹೊಸ ಕಾರ್ಯಕಾರಿ ಸಮಿತಿಯ ಮೊದಲ ಸಭೆಯನ್ನು ಹಿಂದಿನ ಕಾರ್ಯದರ್ಶಿಯು ಚುನಾವಣಾ ಫಲಿತಾಂಶ ಪ್ರಕಟಗೊಂಡ ಒಂದು ವಾರದ ಒಳಗಾಗಿ ಕರೆಯತಕ್ಕದ್ದು. |
| 6.4.1<br>(iii)ಅ | ನಿರ್ದಿಷ್ಟ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಸಮಿತಿ ಮತ್ತು ಉಪಸಮಿತಿಗಳನ್ನು ರಚಿಸುವುದು. | ನಿರ್ದಿಷ್ಟ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು (7) ಏಳು ಸದಸ್ಯರನ್ನು ಮೀರದ ಹಾಗೆ ಈ ಕೆಳಗೆ ವಿವರಿಸಿದಂತೆ ವಿವಿಧ ಸಮಿತಿ / ಉಪಸಮಿತಿಗಳನ್ನು ರಚಿಸುವುದು.<br>(1) ಬಾಲವಿಜ್ಞಾನ ಸಂಪಾದಕ ಸಮಿತಿ<br>(2)ಪ್ರಕಟಣಾ ಸಮಿತಿ<br>(3)ಮಾನವ ಸಂಪನ್ಮೂಲ ತರಬೇತಿ ಸಮಿತಿ<br>(4)ಆರ್ಥಿಕ ಸಮಿತಿ<br>(5)ಜನವಿಜ್ಞಾನ ಚಳುವಳಿ ಸಮಿತಿ – ಇತ್ಯಾದಿ.<br>ಅಗತ್ಯವಿದ್ದಲ್ಲಿ ಪ್ರತಿ ಉಪಸಮಿತಿಯು ಆಹ್ವಾನಿತ ಸದಸ್ಯರನ್ನು ಹೊಂದಬಹುದು. |
| 6.4.1<br>(iii)ಉ. | ಕರಾವಿಪದ ಆಡಳಿತ ಮತ್ತು ಇತರ ಕೆಲಸಗಳಿಗಾಗಿ ಅಲ್ಪಾವಧಿ ಅಥವಾ | ಕರಾವಿಪದ ಆಡಳಿತ ಮತ್ತು ಇತರ ಕೆಲಸಗಳಿಗಾಗಿ ಅಲ್ಪಾವಧಿ ಅಥವಾ ಪೂರ್ಣಾವಧಿ ಹುದ್ದೆಗಳನ್ನು |

| | | |
|---|---|---|
| | ಪೂರ್ಣಾವಧಿ ಹುದ್ದೆಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು. ಈ ಹುದ್ದೆಗಳ ಸಂಬಳಗಳನ್ನು ನಿಗದಿ ಮಾಡುವುದು. ಕರ್ತವ್ಯಗಳು ಮತ್ತು ಉದ್ಯೋಗ ಕರಾರುಗಳ ನಿರೂಪಣೆ ಹಾಗೂ ಈ ಸ್ಥಾನಗಳಿಗೆ ಸಿಬ್ಬಂದಿ ನೇಮಿಸುವುದು. | ನಿರ್ಮಿಸುವುದು ಮತ್ತು ನಿರ್ವಹಿಸುವುದು. ಈ ಹುದ್ದೆಗಳ ಸಂಬಳಗಳನ್ನು ನಿಗದಿಪಡಿಸುವದು. ಕರ್ತವ್ಯಗಳು ಮತ್ತು ಉದ್ಯೋಗ ಕರಾರುಗಳ ನಿರೂಪಣೆ ಹಾಗೂ ಈ ಸ್ಥಾನಗಳಿಗೆ ಸಿಬ್ಬಂದಿ ನೇಮಿಸುವುದು. ಕಾಲಕಾಲಕ್ಕೆ ಅಗತ್ಯವಾದಂತೆ ಸೇವಾ ನಿಯಮಗಳನ್ನು ಪರಿಷ್ಕರಿಸುವುದು. |
| 6.4.1 (viii) | ಸಭೆಯನ್ನು ಕಾರ್ಯದರ್ಶಿ ಅಥವಾ ಈ ಕೆಲಸಕ್ಕಾಗಿ ಕಾರ್ಯದರ್ಶಿಯು ಅಧಿಕಾರ ವಹಿಸಿಕೊಟ್ಟ ಯಾವುದೇ ಅಧಿಕಾರಿಯ ಸಹಿಯಲ್ಲಿ ಸೂಚನಾ ಪತ್ರದ ಮೂಲಕ ಕರೆಯತಕ್ಕದ್ದು. ಕಾರ್ಯಕಾರಿ ಸಮಿತಿ ಪ್ರತಿ ಸದಸ್ಯರಿಗೂ ಸದಸ್ಯರ ರಿಜಿಸ್ಟರಿನಲ್ಲಿರುವ ವಿಳಾಸಕ್ಕೆ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ ಸೂಚನಾ ಪತ್ರ ತಲುಪುವಂತೆ ಕಳುಹಿಸಬೇಕು. | ಕಾರ್ಯಕಾರಿ ಸಮಿತಿ ಸಭೆಯನ್ನು ಕಾರ್ಯದರ್ಶಿ ಅಥವಾ ಈ ಕೆಲಸಕ್ಕಾಗಿ ಕಾರ್ಯದರ್ಶಿಯು ಅಧಿಕಾರ ವಹಿಸಿಕೊಟ್ಟ ಯಾವುದೇ ಅಧಿಕಾರಿಯ ಸಹಿಯಲ್ಲಿ ಸೂಚನಾ ಪತ್ರದ ಮೂಲಕ ಕರೆಯತಕ್ಕದ್ದು. ಕಾರ್ಯಕಾರಿ ಸಮಿತಿಯ ಪ್ರತಿ ಸದಸ್ಯರಿಗೂ, ಸದಸ್ಯರ ರಿಜಿಸ್ಟರಿನಲ್ಲಿರುವ ವಿಳಾಸಕ್ಕೆ ಕೋರಿಯರ್ ಮೂಲಕ ಸೂಚನಾ ಪತ್ರ ತಲುಪುವಂತೆ ಕಳುಹಿಸಬೇಕು.<br>(ಕಾರಣ : ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ವ್ಯವಸ್ಥೆಯನ್ನು ಅಂಚೆ ಇಲಾಖೆ ರದ್ದುಗೊಳಿಸಿದೆ). |
| 8<br>8.6 | ಕರಾವಿಪ ಸಭೆ ಕರೆಯುವ ಪ್ರತಿ ನೋಟೀಸಿನಲ್ಲೂ ಇಂತಹ ಸಭೆಗಳು ಸೇರುವ ದಿನಾಂಕ, ವೇಳೆ ಹಾಗೂ ಸ್ಥಳಗಳನ್ನು ನಮೂದಿಸಿರಬೇಕು ಮತ್ತು ಸದಸ್ಯರ ರಜಿಸ್ಟರಿನಲ್ಲಿ ಕೊಟ್ಟಿರುವ ಪ್ರತಿಯೊಬ್ಬ ಸದಸ್ಯರ ವಿಳಾಸಕ್ಕೂ ವಾರ್ಷಿಕ ಮಹಾಸಭೆ ಸೇರುವ ದಿನಾಂಕಕ್ಕೆ ಸ್ಪಷ್ಟವಾಗಿ 21 ದಿನಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಮುಂಚಿತವಾಗಿ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ ನೋಟೀಸನ್ನು ಕಳುಹಿಸತಕ್ಕದ್ದು. | ಕರಾವಿಪ ಸಭೆ ಕರೆಯುವ ಪ್ರತಿ ನೋಟೀಸಿನಲ್ಲೂ ಇಂತಹ ಸಭೆಗಳು ಸೇರುವ ದಿನಾಂಕ ವೇಳೆ ಹಾಗೂ ಸ್ಥಳಗಳನ್ನು ನಮೂದಿಸಿರಬೇಕು ಮತ್ತು ಸದಸ್ಯರ ರಜಿಸ್ಟರಿನಲ್ಲಿ ಕೊಟ್ಟಿರುವ ಪ್ರತಿಯೊಬ್ಬ ಸದಸ್ಯರ ವಿಳಾಸಕ್ಕೂ ವಾರ್ಷಿಕ ಮಹಾಸಭೆ ಸೇರುವ ದಿನಾಂಕಕ್ಕೆ ಸ್ಪಷ್ಟವಾಗಿ 21 ದಿನಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಮುಂಚಿತವಾಗಿ ಸಾಮಾನ್ಯ ಅಂಚೆಯ ಮೂಲಕ ನೋಟೀಸನ್ನು ತಲುಪಿಸತಕ್ಕದ್ದು. ಅದರಂತೆ ಮಹಾಸಭೆಯ ಸೂಚನಾಪತ್ರವನ್ನು ಕರಾವಿಪದ ಅಂತರ್ಜಾಲ ತಾಣ (ವೆಬ್‌ಸೈಟ್) ದಲ್ಲಿಯೂ ಸಹ ಸದಸ್ಯರ ಗಮನಕ್ಕಾಗಿ ಪ್ರಕಟಿಸುವದು. |
| 8<br>8.11 | ಸಂಘವನ್ನು ವಿಸರ್ಜಿಸಿದಾಗ ವಿಸರ್ಜನಾ ದಿನಾಂಕಕ್ಕೆ ಸಂಬಂಧಿಸಿದಂತೆ ಇರುವ ಆಸ್ತಿಯನ್ನು ಯಾವುದೇ ಸಂದರ್ಭದಲ್ಲಿಯೂ ಸದಸ್ಯರಿಗೆ / ಆಡಳಿತ ಮಂಡಳಿ ಸದಸ್ಯರಿಗೆ / ಸರ್ಕಾರದ ಪ್ರತಿನಿಧಿಗಳಿಗೆ ವಿತರಿಸಬಾರದು. ಬದಲಿಗೆ ಇದನ್ನು ಇನ್ನೊಂದು ಚಾರಿಟೆಬಲ್ ಟ್ರಸ್ಟ್ ಸಂಘಕ್ಕೆ ಅದೂ ಈ ಬಗೆಯ ಧ್ಯೇಯಗಳುಳ್ಳ ಹಾಗೂ ಆದಾಯ ತೆರಿಗೆ | ಕರಾವಿಪ ಸಂಸ್ಥೆಯನ್ನು ವಿಸರ್ಜಿಸಿದಾಗ ವಿಸರ್ಜನಾ ದಿನಾಂಕಕ್ಕೆ ಸಂಬಂಧಿಸಿದಂತೆ ಇರುವ ಯಾವುದೇ ಆಸ್ತಿಯನ್ನು ಸಾಲ / ಋಣಗಳೇನಾದರೂ ಇದ್ದಲ್ಲಿ ಅವುಗಳನ್ನು ತೀರಿಸಿದ ಬಳಿಕ ಯಾವುದೇ ಸಂದರ್ಭದಲ್ಲಿಯೂ ಸಂಸ್ಥೆಯ ಸದಸ್ಯರಿಗೆ / ಆಡಳಿತ ಮಂಡಳಿಯ ಸದಸ್ಯರಿಗೆ / ಸರ್ಕಾರದ ಪ್ರತಿನಿಧಿಗೆ ವರ್ಗಾಯಿಸುವಂತಿಲ್ಲ. ಇದರ ಬದಲಾಗಿ ಆಸ್ತಿಯನ್ನು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರಲ್ಲಿ 3/5ರಷ್ಟು ಸದಸ್ಯರು ಮತ ಹಾಕಿ ನಿರ್ಣಯಿಸಿದ ಬಳಿಕ |

| | | |
|---|---|---|
| | ಅಧಿನಿಯಮ 1961ರ ಯು.ಎಸ್. 80ಜಿ.ಯ ಮಾನ್ಯತೆ ಪಡೆದ ಸಂಘಕ್ಕೆ ವರ್ಗಾಯಿಸತಕ್ಕದ್ದು. | ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ 1960ರ 32ನೇ ಕಲಂನ ರೀತ್ಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಂತೆ ಸಮಾನ ಧ್ಯೇಯೋದ್ದೇಶಗಳನ್ನುಹೊಂದಿದ ಹಾಗೂ ಆದಾಯ ತೆರಿಗೆ ಅಧಿನಿಯಮ 80ಜಿ ರಂತೆ ಮಾನ್ಯತೆ ಪಡೆದ ಚಾರಿಟೆಬಲ್ ಟ್ರಸ್ಟ್ / ಸಂಸ್ಥೆಗೆ ವರ್ಗಾಯಿಸತಕ್ಕದ್ದು. |
| 8<br>8.14 | ಸಂಘದ ಆದಾಯವನ್ನು ಸಂಘದ ಗುರಿ ಸಾಧನೆಗೆ ಮಾತ್ರ ಬಳಕೆ ಮಾಡಿಕೊಳ್ಳಬೇಕಲ್ಲದೇ ಅದರ ಭಾಗಾಂಶವನ್ನು ಟ್ರಸ್ಟ್ / ಸಂಘದ ಸದಸ್ಯರಿಗೆ, ಆದಾಯ ಬಡ್ಡಿಯ ಪಾಲು ಇವುಗಳ ರೂಪದಲ್ಲಿ ವಿತರಿಸಲಾಗುವುದು. | ಸಂಘದ ಆದಾಯವನ್ನು ಸಂಘದ ಗುರಿ ಸಾಧನೆಗೆ ಮಾತ್ರ ಬಳಕೆ ಮಾಡಿಕೊಳ್ಳಬೇಕಲ್ಲದೇ ಅದರ ಭಾಗಾಂಶವನ್ನು ಟ್ರಸ್ಟ್ / ಸಂಘದ ಸದಸ್ಯರಿಗೆ, ಆದಾಯ ಬಡ್ಡಿಯ ಪಾಲು ಇವುಗಳ ರೂಪದಲ್ಲಿ ವಿತರಿಸಲಾಗದು. |
| 9<br>9.1 | ಸಂಘದ ಲಿಖಿತ ದಾಖಲೆ ಪತ್ರಗಳನ್ನು ಅದರಲ್ಲಿ ಪ್ರಸ್ತಾಪಿಸಿರುವ ಉದ್ದೇಶಗಳಿಗಾಗಿ ಅಥವಾ ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1960 ಸೆಕ್ಷನ್ 3ರಲ್ಲಿ ನಮೂದಿಸಿರುವಂತೆ ಇತರ ಉದ್ದೇಶಗಳಿಗಾಗಿ ಬದಲಾಯಿಸುವುದು, ವಿಸ್ತರಿಸುವುದು, ಸಂಕ್ಷಿಪ್ತಗೊಳಿಸುವುದು ಕರಾವಿಪ ಕಾರ್ಯಕಾರಿ ಸಮಿತಿಗೆ ಅವಶ್ಯವೆನಿಸಿದರೆ, ಸಮಿತಿಯು ಈ ಪ್ರಸ್ತಾಪವನ್ನು ಮಹಾಸಭೆ ಸದಸ್ಯರಿಗೆ ಲಿಖಿತ ಅಥವಾ ಮುದ್ರಿತ ವರದಿಯ ಮೂಲಕ ಒಪ್ಪಿಸತಕ್ಕದ್ದು ಮತ್ತು ಕಾನೂನು ಹಾಗೂ ನಿಬಂಧನೆಗಳಿಗೆ ಅನುಗುಣವಾಗಿ ವಿಶೇಷ ಮಹಾಸಭೆಯನ್ನು ವಿಷಯದ ಪರಿಗಣನೆಗಾಗಿ ಕೂಡಿಸತಕ್ಕದ್ದು. ಇಂತಹ ವರದಿಗಳು ಮದ್ದಾಂ ಅಥವಾ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಅಂಚೆಯ ಮೂಲಕ ಮಹಾಸಭೆಯ ಪ್ರತಿಯೊಬ್ಬ ಸದಸ್ಯರಿಗೂ, ಕಾರ್ಯಕಾರಿ ಸಮಿತಿಯು ವಿಷಯ ಪರಿಗಣನೆಗಾಗಿ ಕರೆದ ವಿಶೇಷ ಮಹಾಸಭೆ ಸೇರುವ 21 ದಿನಗಳಿಗೆ ಮುಂಚಿತವಾಗಿ ತಲುಪಿದರೆ ವಿನಾ ಮತ್ತು ವಿಷಯಕ್ಕೆ ವಿರೋಧವಾಗಿ ಅರ್ಹತೆಯುಳ್ಳ ಸದಸ್ಯರು ಪ್ರಸ್ತಾಪದ ಪರವಾಗಿ ಮತ ನೀಡಿ ಒಪ್ಪಿಗೆ ಕೊಟ್ಟರೆ ವಿನಾ ಇಂತಹ ಪ್ರಸ್ತಾಪಕ್ಕೆ ಕೊಟ್ಟ ಮಂಜೂರಾತಿಯು ಗಣನೆಗೆ ಬರುವುದಿಲ್ಲ. | ಸಂಘದ ಲಿಖಿತ ದಾಖಲೆ ಪತ್ರಗಳನ್ನು ಅದರಲ್ಲಿ ಪ್ರಸ್ತಾಪಿಸಿರುವ ಉದ್ದೇಶಗಳಿಗಾಗಿ ಅಥವಾ ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1960 ಸೆಕ್ಷನ್ 3ರಲ್ಲಿ ನಮೂದಿಸಿರುವಂತೆ ಇತರ ಉದ್ದೇಶಗಳಿಗಾಗಿ ಬದಲಾಯಿಸುವುದು, ವಿಸ್ತರಿಸುವುದು, ಸಂಕ್ಷಿಪ್ತಗೊಳಿಸುವುದು ಕರಾವಿಪ ಕಾರ್ಯಕಾರಿ ಸಮಿತಿಗೆ ಅವಶ್ಯವೆನಿಸಿದರೆ, ಸಮಿತಿಯು ಈ ಪ್ರಸ್ತಾಪವನ್ನು ಮಹಾಸಭೆ ಸದಸ್ಯರಿಗೆ ಲಿಖಿತ ಅಥವಾ ಮುದ್ರಿತ ವರದಿಯ ಮೂಲಕ ಒಪ್ಪಿಸತಕ್ಕದ್ದು ಮತ್ತು ಕಾನೂನು ಹಾಗೂ ನಿಬಂಧನೆಗಳಿಗೆ ಅನುಗುಣವಾಗಿ ವಿಶೇಷ ಮಹಾಸಭೆಯನ್ನು ವಿಷಯದ ಪರಿಗಣನೆಗಾಗಿ ಕೂಡಿಸತಕ್ಕದ್ದು. ಇಂತಹ ವರದಿಗಳು ಖುದ್ದಾಗಿ ಅಥವಾ ಸಾಮಾನ್ಯ ಅಂಚೆ ಮೂಲಕ ಹಾಗೂ ಕರಾವಿಪದ ಅಂತರ್ಜಾಲ ತಾಣ (ವೆಬ್ ಸೈಟ್) ದಲ್ಲಿಯೂ ಪ್ರಕಟಿಸುವ ಮೂಲಕ ಮಹಾಸಭೆಯ ಪ್ರತಿಯೊಬ್ಬ ಸದಸ್ಯರಿಗೂ, ಕಾರ್ಯಕಾರಿ ಸಮಿತಿಯು ವಿಷಯ ಪರಿಗಣನೆಗಾಗಿ ಕರೆದ ವಿಶೇಷ ಮಹಾಸಭೆ ಸೇರುವ 21 ದಿನಗಳಿಗೆ ಮುಂಚಿತವಾಗಿ ತಲುಪಿದರೆ ವಿನಾ ಮತ್ತು ವಿಷಯಕ್ಕೆ ವಿರೋಧವಾಗಿ ಅರ್ಹತೆಯುಳ್ಳ ಸದಸ್ಯರು ಪ್ರಸ್ತಾಪದ ಪರವಾಗಿ ಮತ ನೀಡಿ ಒಪ್ಪಿಗೆ ಕೊಟ್ಟರೆ ವಿನಾ ಇಂತಹ ಪ್ರಸ್ತಾಪಕ್ಕೆ ಕೊಟ್ಟ ಮಂಜೂರಾತಿಯು ಗಣನೆಗೆ ಬರುವುದಿಲ್ಲ. |

| | | |
|---|---|---|
| 9<br>9.2 | ಕರಾವಿಪದ ಹೆಸರು ಹಾಗೂ ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿ ಮಾಡಬೇಕೆಂದು ಕರಾವಿಪದ ಕಾರ್ಯಕಾರಿ ಸಮಿತಿಗೆ ಅವಶ್ಯವೆನಿಸಿದರೆ ಇದನ್ನು ಸಮಿತಿಯು ವಿಶೇಷ ಮಹಾಸಭೆಯಲ್ಲಿ ಮಂಡಿಸಬೇಕು. ಇದಕ್ಕಾಗಿ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ ಕರಾವಿಪದ ಪ್ರತಿ ಸದಸ್ಯರಿಗೂ ವಿಶೇಷ ಮಹಾಸಭೆಯು ಸೇರುವ 21 ದಿನಗಳಿಗೆ ಮುಂಚಿತವಾಗಿ ತಲುಪುವಂತೆ ನೋಟೀಸು ಕಳುಹಿಸಬೇಕು. ತಿದ್ದುಪಡಿಯನ್ನು ಸೂಚಿಸುವ ನಿರ್ಣಯವು ಅರ್ಹತೆಯುಳ್ಳ ಸದಸ್ಯರು ನಿರ್ಣಯಕ್ಕೆ ವಿರೋಧವಾಗಿ ಹಾಕಿದ ಮತಗಳಿದ್ದರೆ ಅದಕ್ಕೆ ಮೂರರಷ್ಟು ಸಂಖ್ಯೆಗಿಂತ ಕಡಿಮೆಯಿಲ್ಲದಂತೆ ಅರ್ಹತೆಯುಳ್ಳ ಸದಸ್ಯರು ಅದರ ಪರವಾಗಿ ಸೂಚಿಸಿದ ಮತಗಳಿದ್ದರೆ ಮಾತ್ರ ಅಂಗೀಕೃತವೆಂದು ಪರಿಗಣಿಸಲ್ಪಡುತ್ತದೆ. | ಕರಾವಿಪದ ಹೆಸರು ಹಾಗೂ ನಿಯಮ ಮತ್ತು ನಿಬಂಧನೆಗಳ ತಿದ್ದುಪಡಿ ಮಾಡಬೇಕೆಂದು ಕರಾವಿಪದ ಕಾರ್ಯಕಾರಿ ಸಮಿತಿಗೆ ಅವಶ್ಯವೆನಿಸಿದರೆ ಇದನ್ನು ಸಮಿತಿಯು ವಿಶೇಷ ಮಹಾಸಭೆಯಲ್ಲಿ ಮಂಡಿಸಬೇಕು. ಇದಕ್ಕಾಗಿ ಸಾಮಾನ್ಯ ಅಂಚೆ ಮೂಲಕ ಕರಾವಿಪದ ಪ್ರತಿ ಸದಸ್ಯರಿಗೂ ವಿಶೇಷ ಮಹಾಸಭೆಯು ಸೇರುವ 21 ದಿನಗಳಿಗೆ ಮುಂಚಿತವಾಗಿ ತಲುಪುವಂತೆ ನೋಟೀಸು ಕಳುಹಿಸಬೇಕು. ತಿದ್ದುಪಡಿ ಮಾಡಲು ಉದ್ದೇಶಿಸಿದ ನಿಖರವಾದ ಮಾಹಿತಿಯನ್ನು ಕರಾವಿಪದ ಅಂತರ್ಜಾಲ ತಾಣ (ವೆಬ್ ಸೈಟ್) ದಲ್ಲಿಯೂ ಸದಸ್ಯರ ಗಮನಕ್ಕಾಗಿ ಪ್ರಕಟಿಸಬೇಕು. ತಿದ್ದುಪಡಿಯನ್ನು ಸೂಚಿಸುವ ನಿರ್ಣಯವು ಅರ್ಹತೆಯುಳ್ಳ ಸದಸ್ಯರು ನಿರ್ಣಯಕ್ಕೆ ವಿರೋಧವಾಗಿ ಹಾಕಿದ ಮತಗಳಿದ್ದರೆ ಅದಕ್ಕೆ ಮೂರರಷ್ಟು ಸಂಖ್ಯೆಗಿಂತ ಕಡಿಮೆಯಿಲ್ಲದಂತೆ ಅರ್ಹತೆಯುಳ್ಳ ಸದಸ್ಯರು ಅದರ ಪರವಾಗಿ ಸೂಚಿಸಿದ ಮತಗಳಿದ್ದರೆ ಮಾತ್ರ ಅಂಗೀಕೃತವೆಂದು ಪರಿಗಣಿಸಲ್ಪಡುತ್ತದೆ. |